ಮೈಸೂರು ವಿಶ್ವವಿದ್ಯಾನಿಲಯ

# ಯುವರಾಜ ಕಾಲೇಜು, ಮೈಸೂರು

(ಪರೀಕ್ಷಾ ನಿಯಂತ್ರಣಾಧಿಕಾರಿಗಳ ಕಛೇರಿ)

ಜೆ.ಎಲ್.ಬಿ.ರಸ್ತೆ, ಮೈಸೂರು – 570 005, ಕರ್ನಾಟಕ, ಭಾರತ

---

ಸಂಖ್ಯೆ: ವೈ.ಸಿ.ಎಂ/ಪ.ವಿ/ **461** /2023-24 ದಿನಾಂಕ: 07-02-2024

## NOTIFICATION /ಅಧಿಸೂಚನೆ

ವಿಷಯ: ಫೆಬ್ರವರಿ/ಮಾರ್ಚ್-2024 ರಲ್ಲಿ ಜರುಗಲಿರುವ I, III, VII & IXನೇ ಸೆಮಿಸ್ಟರ್‌ನ (CBCS ಪದ್ಧತಿಯ) ಸ್ನಾತಕೋತ್ತರ ಪದವಿ (PG) ಪರೀಕ್ಷೆಗಳಿಗೆ ಶುಲ್ಕ ಪಾವತಿ ಮತ್ತು ಅಭ್ಯರ್ಥನ ಪತ್ರ ಸಲ್ಲಿಸುವ ಬಗ್ಗೆ.

***********

ಫೆಬ್ರವರಿ/ಮಾರ್ಚ್-2024ರ ಮಾಹೆಯಲ್ಲಿ ನಡೆಯಲಿರುವ I, III, VII & IXನೇ ಸೆಮಿಸ್ಟರ್‌ನ ಸ್ನಾತಕೋತ್ತರ ಪದವಿಯ (CBCS ಪದ್ಧತಿಯ) ಪರೀಕ್ಷೆಗಳು ದಿನಾಂಕ: **05-03-2024** ರಿಂದ ಪ್ರಾರಂಭವಾಗಲಿದೆ. ಈ ಸಂಬಂಧದ ವಿವರಗಳು ಕೆಳಕಂಡಂತಿರುತ್ತದೆ.

| | | |
|---|---|---|
| 1) | I, III, VII & IX ನೇ ಚಾತುರ್ಮಾಸದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕಗಳನ್ನು ಆನ್‌ಲೈನ್ ಮುಖಾಂತರ ಪಾವತಿಸಿ ಹಾಗೂ ಶುಲ್ಕ ಪಾವತಿಸಿದ ನಂತರ ಪರೀಕ್ಷಾ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು (ವಿದ್ಯಾರ್ಥಿಗಳು **"uucms.karnataka.gov.in"**ಮುಖಾಂತರ ವಿದ್ಯಾರ್ಥಿಗಳ ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸಿರುವ ಸಂದರ್ಭದಲ್ಲಿ ನಿಮ್ಮ ಕೋರ್ಸಿನ **AEC Languages, SEC** ಮತ್ತು **Open Elective** ಪತ್ರಿಕೆಗಳನ್ನು ಪರಿಶೀಲಿಸಿ ಆಯ್ಕೆ ಮಾಡಿಕೊಳ್ಳತಕ್ಕದ್ದು) ಅಂತಿಮ ದಿನಾಂಕ:<br>I, III, VII & IX Semester (**CBCS Scheme**) The last date for the online payment with filled Examination form | **08-02-2024**<br>ರಿಂದ<br>**16-02-2024** |
| 2) | ರೂ. 100/- ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು **(with 1st penalty)** | **17-02-2024** |
| 3) | ರೂ.200/- ಗಳ ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು **(with 2nd and last penalty)** | **18-02-2024** |
| 4) | ಕಾಲೇಜಿನವರು ಪ್ರವೇಶ ಪತ್ರಗಳನ್ನು ಮುದ್ರಿಸಿಕೊಳ್ಳುವ ದಿನಾಂಕ: | **20-02-2024**<br>ರಿಂದ<br>**23-02-2024** |
| 5) | ಪ್ರಾಯೋಗಿಕ ಪರೀಕ್ಷೆಗಳನ್ನು ಪ್ರಾರಂಭಿಸಿ ಹಾಗೂ ಪೂರ್ಣಗೊಳಿಸುವ ದಿನಾಂಕ | **24-02-2024**<br>ರಿಂದ<br>**04-03-2024** |
| 6) | IA (Internal Assessment) **C-1 & C-2** ಅಂಕಗಳನ್ನು ಆನ್‌ಲೈನ್ ಮೂಲಕ ನಮೂದಿಸಲು ಕೊನೆಯ ದಿನಾಂಕ | **23-02-2024** |
| 7) | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **05-03-2024** |

**ಸೂಚನೆಗಳು:**

1. 1 ಮತ್ತು 3ನೇ ಸೆಮಿಸ್ಟರ್‌ನ (NEP) ಪರೀಕ್ಷಾ ಕಾರ್ಯಗಳು UUCMS ಮುಖಾಂತರ ಕಾಲೇಜಿನ ವತಿಯಿಂದ "Academic Module ನಲ್ಲಿ Curriculum Mapping ಮಾಡಿದ ನಂತರ ವಿದ್ಯಾರ್ಥಿಗಳು ಆನ್‌ಲೈನ್ (UUCMS) ಮೂಲಕ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಂಡು Mapping ಮಾಡಿಕೊಳ್ಳಲು ಕಾಲೇಜಿನವರು QP Code/Course Codeಗಳನ್ನು ನೀಡಬೇಕು ಹಾಗೂ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಲು ಮಾರ್ಗದರ್ಶನ ನೀಡಬೇಕು.
2. 7 ಮತ್ತು 9ನೇ ಚಾತುರ್ಮಾಸದ ಎಂ.ಎಸ್ಸಿ. ಮಾಲಿಕ್ಯೂಲರ್ ಬಯಾಲಾಜಿ ವಿದ್ಯಾರ್ಥಿಗಳು ಫಲಿತಾಂಶ ವೀಕ್ಷಿಸುವ ಅಂತರ್ಜಾಲದ ವತಿಯಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಶುಲ್ಕ ಸಂದಾಯ ಮಾಡಿದ ರಶೀದಿ ಮತ್ತು ಅಭ್ಯರ್ಥನ ಪತ್ರವನ್ನು ಪರೀಕ್ಷಾ ನಿಯಂತ್ರಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.
3. ಎಲ್ಲಾ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ: **04-03-2024** ರೊಳಗೆ ಪೂರ್ಣಗೊಳಿಸುವುದು. ಸದರಿ ಪರೀಕ್ಷೆಯನ್ನು ಆಂತರಿಕ ಮತ್ತು ಬಾಹ್ಯ ಪರೀಕ್ಷಕರು (External Examiners) ನಡೆಸುವುದು.
4. ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ಆ ದಿನದಂದೇ **Online ಮುಖಾಂತರ ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು ಹಾಗು ಅಂಕಗಳ ಮೂಲ ಪ್ರತಿಯನ್ನು** ಪ್ರಾಂಶುಪಾಲರ ಕಛೇರಿಗೆ ಸಲ್ಲಿಸುವುದು, ನಂತರ ಪರೀಕ್ಷಾ ನಿಯಂತ್ರಣಾಧಿಕಾರಿಗಳ ಕಛೇರಿಗೆ ತಲುಪಿಸುವುದು.
5. ವಿದ್ಯಾರ್ಥಿಗಳು ಭರ್ತಿ ಮಾಡಿದ ವಿಷಯಗಳ ಆಯ್ಕೆ **(Subject selection)** ಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ, ಪರೀಕ್ಷಾ ಅರ್ಜಿಗಳಲ್ಲಿ ನ್ಯೂನತೆಗಳಿದ್ದಲ್ಲಿ ಪ್ರವೇಶ ಪತ್ರಗಳ ಮುದ್ರಣಕ್ಕೆ ಪ್ರಾಂಶುಪಾಲರ ಅನುಮೋದನೆ ಪಡೆಯುವ ಮೊದಲು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪತ್ರಿಕೆಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳುವುದು ಇಲ್ಲದಿದ್ದರೇ ಕಾಲೇಜಿನ ಆಡಳಿತ ವರ್ಗ ಇಂತಹ ತಪ್ಪುಗಳಿಗೆ ಹೊಣೆಗಾರರಾಗಿರುತ್ತಾರೆ.

ಸ್ನಾತಕೋತ್ತರ ಪದವಿಯ ಪರೀಕ್ಷಾ ಶುಲ್ಕಗಳ ದರಗಳು (CBCS ಪದ್ಧತಿಯ Freshers & Repeaters)

| | M.Sc., Molecular Biology/ M.Sc., | |
|---|---|---|
| 1 | a. Whole Examination fee (per semester) | Rs. 1,573/- |
| | b. Per paper with Practical | Rs. 968/- |
| | c. Per Paper Without Practical | Rs. 627/- |
| | d. Marks card Fee per Semester for all Courses | Rs. 352/- |
| | **M.Sc., Food Science and Nutrition** | |
| 2 | a. Whole Examination fee (per semester) | Rs. 2,420/- |
| | b. Per paper with Practical | Rs. 968/- |
| | c. Per Paper Without Practical | Rs. 627/- |
| | d. Marks card Fee per Semester for all Courses | Rs. 352/- |

**Subject to maximum of whole examination fee fixed per semester.**

ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆಗಳು:

1. ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
2. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
3. ಪ್ರತಿಯೊಬ್ಬ ಅಭ್ಯರ್ಥಿಯೂ ಪ್ರತಿಯೊಂದು ಚಾತುರ್ಮಾಸದ ಪರೀಕ್ಷೆಗೆ ಮೇಲೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ಜೊತೆಗೆ ಅಂಕಪಟ್ಟಿ ಶುಲ್ಕ ರೂ. 352/- ನ್ನು ಪಾವತಿಸತಕ್ಕದ್ದು.
4. ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಕಾಲೇಜಿನವರು ಪರೀಕ್ಷೆಗಳು ಪ್ರಾರಂಭವಾಗುವುದಕ್ಕೆ ಸಾಕಷ್ಟು ಮುಂಚಿತವಾಗಿ Online ಮೂಲಕ ಪ್ರಿಂಟ್ ಪಡೆದು, ಪ್ರಾಂಶುಪಾಲರ ಯಥಾಪ್ರತಿ ಸಹಿಯೊಂದಿಗೆ (Facsimile) ಪರೀಕ್ಷಾ ನಿಯಂತ್ರಣಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು ಇವರ ಯಥಾಪ್ರತಿ (Facsimile) ಸಹಿಯನ್ನು ಹಾಕಿಸಿಕೊಳ್ಳಬೇಕು ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.
5. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇತ್ತೀಚಿನ ಭಾವಚಿತ್ರದ ಮೇಲೆ ಪೂರ್ತಿ ಸಹಿ ಮಾಡಿ (ವಿದ್ಯಾರ್ಥಿಯನ್ನು ಗುರುತಿಸಲಾಗಿದೆ ಎಂದು ದೃಢೀಕರಿಸಿ) ಪ್ರಾಂಶುಪಾಲರ ಸಹಿಯೊಂದಿಗೆ ಪ್ರವೇಶ ಪತ್ರಗಳನ್ನು ಅರ್ಜಿಯೊಡನೆ ಪರೀಕ್ಷಾ ನಿಯಂತ್ರಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.
6. ಭಾವಚಿತ್ರಗಳಿಲ್ಲದ ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿಗಳು/ಪ್ರಾಂಶುಪಾಲರ ಸಹಿ/ ಮೊಹರು ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಕೇಂದ್ರ ಪರೀಕ್ಷಾ ಮುಖ್ಯಾಧಿಕಾರಿಗಳು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.
7. ಲಿಖಿತ ಪರೀಕ್ಷೆಗಳಿಗೆ ಸಂಬಂಧಪಟ್ಟ ವಿವರವಾದ ವೇಳಾಪಟ್ಟಿಯನ್ನು ಕಾಲೇಜಿನ ನಾಮಫಲಕಗಳಲ್ಲಿ ಮತ್ತು ಕಾಲೇಜಿನ ಅಂತರ್‌ಜಾಲದಲ್ಲಿ ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

ಪ್ರಾಂಶುಪಾಲರ ಕಛೇರಿಯಲ್ಲಿರುವ ಪರೀಕ್ಷಾ ಸಿಬ್ಬಂದಿಗಳಿಗೆ ಸೂಚನೆಗಳು:

1. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಮಾಹಿತಿಯನ್ನು Online ಮೂಲಕ ನಮೂದಿಸಿದ ನಂತರ ಕಾಲೇಜು ಹಂತದಲ್ಲಿಯೇ ಪ್ರವೇಶ ಪತ್ರಗಳನ್ನು ಮುದ್ರಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ವಿದ್ಯಾರ್ಥಿಗಳ ಹಾಜರಾತಿ ಮತ್ತು ಪ್ರವೇಶಾತಿ ಅನುಮತಿಯನ್ನು ಪ್ರವೇಶಪತ್ರದಲ್ಲಿ ದೃಢೀಕರಿಸದ ನಂತರ ಪರೀಕ್ಷಾ ನಿಯಂತ್ರಣಾಧಿಕಾರಿ ಅವರ ಮೇಲುಸಹಿಗಾಗಿ ಪರೀಕ್ಷೆ ಪ್ರಾರಂಭಕ್ಕಿಂತ ಮುಂಚಿತವಾಗಿ ಕಳುಹಿಸಬೇಕು.
2. ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಮೊಹರು ಮಾಡಿದ ಕವರುಗಳಲ್ಲಿ ಇಟ್ಟು ಕಾಲೇಜಿನಲ್ಲಿ ನಡೆಯುವ ಎಲ್ಲಾ ವಿಷಯಗಳ ಪ್ರಾಯೋಗಿಕ (ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ಮುನ್ನ) ಪರೀಕ್ಷೆಗಳು ಮುಗಿದ ಮರು ದಿನವೇ ಕಳುಹಿಸಬೇಕು. ಈ ದಿನಾಂಕ ಮೀರಿ ಪ್ರಾಯೋಗಿಕ ಪರೀಕ್ಷೆಗಳ ಅಂಕಪಟ್ಟಿಗಳನ್ನು ಕಳುಹಿಸಿದ್ದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳು ತಡವಾಗಿ ಪ್ರಕಟವಾಗುವ ಸಂಭವವನ್ನು ತಪ್ಪಿಸಲು ಜಾಗರೂಕರಾಗಿರಲು ಕೋರಲಾಗಿದೆ. ಉತ್ತರ ಪತ್ರಿಕೆಗಳ ಕಟ್ಟುಗಳಲ್ಲಿ (Answer Book Bundles) ಅಂಕಪಟ್ಟಿಗಳನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ. ಅಂಕಪಟ್ಟಿಗಳನ್ನು ತಯಾರಿಸುವಾಗ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು (Register Number) ಪೂರ್ಣವಾಗಿ ಬರೆಯಬೇಕೆಂಬ ವಿಚಾರವನ್ನು ಸಹ ಪ್ರಾಯೋಗಿಕ ಪರೀಕ್ಷಕರಿಗೆ ತಿಳಿಸಬೇಕು. ಪ್ರಾಯೋಗಿಕ ಪರೀಕ್ಷಕರಿಗೆ ಪ್ರಾಯೋಗಿಕ ಅಂಕಗಳ ಪಟ್ಟಿಯನ್ನು (Marks List) ಒದಗಿಸುವುದಕ್ಕಿಂತ ಮೊದಲು ಕಾಲೇಜಿನ ಮೊಹರನ್ನು (Seal) Marks List ಕೆಳಗಡೆ ಮಧ್ಯಭಾಗದಲ್ಲಿ ತಪ್ಪದೆ ಹಾಕಬೇಕು.
3. ಪ್ರಾಯೋಗಿಕ ಮತ್ತು ಲಿಖಿತ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಗೈರುಹಾಜರಾದಲ್ಲಿ ಆ ಪರೀಕ್ಷಾ ದಿನದಂದೇ ಆಫ್‌ಲೈನ್ ಮುಖಾಂತರ ಗೈರುಹಾಜರಿಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

| | |
|---|---|
| Controller of Examinations<br>Yuvaraja's College (Autonomous)<br>University of Mysore, MYSURU-570 005 | Principal 08/02/24<br>Yuvaraja's College (Autonomous)<br>University of Mysore<br>Mysore-570 005 |

ಪ್ರತಿಗಳು:

1. ಡಾ. ಹೆಚ್ ಎಸ್ ಜಯಂತ್, NEP Co-Ordinator, ರವರು ಯುವರಾಜ ಕಾಲೇಜು, ಮೈಸೂರು
2. ಎಲ್ಲಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು , ಯುವರಾಜ ಕಾಲೇಜು, ಮೈಸೂರು
3. ಕಛೇರಿ ಪ್ರತಿ